## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

## ಶಹಾಪೂರ

CW-13 PW-12

ಸಿ.ಸಿ. ನಂ. 59/2021

| | |
|---|---|
| ಹೆಸರು | ಃ ಡಿ ವಿ ನಾಯಕ |
| ತಂದೆ ಹೆಸರು | ಃ ಹಣಮಂತ್ರಾಯ |
| ವಯಸ್ಸು | ಃ 45 ವರ್ಷ |
| ಉದ್ಯೋಗ | ಃ ಪಿ ಎಸ್ ಐ ಶಹಾಪೂರ ಪಿ ಎಸ್ |
| ವಾಸ | ಃ ಶಹಾಪೂರ |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 06-08-2025.

ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ನಾನು 2019 ರಿಂದ 20223 ರವರೆಗೆ ಭೀಮರಾಯ ಗುಡಿ ಪೋಲಿಸ ಠಾಣೆಯಲ್ಲಿ ಪಿ ಎಸ್ ಐ ಆಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 15.08.2020 ರಂದು ಸಂ.07.15 ರ ಸಮಯದಲ್ಲಿ ನಾನು ನಮ್ಮ ಠಾಣೆಯಲ್ಲಿದ್ದಾಗ ಚಾಸಾ-1 ರವರು ನಮ್ಮ ಠಾಣೆಗೆ ಹಾಜರಾಗಿ 4 ನೇ ಆರೋಪಿಯನ್ನು ನನ್ನ ಸಮಕ್ಷಮ ಹಾಜರುಪಡಿಸಿ, ಜಪ್ತಿ ಪಂಚನಾಮೆ ಹಾಗೂ ಮು.ಮಾಲುಗಳ ಜೊತೆಗೆ ತಮ್ಮ ದೂರನ್ನು ಸಲ್ಲಿಸಿರುತ್ತಾರೆ. ಸಾಕ್ಷಿಯು ಸದರಿ ದೂರನ್ನು ಗುರುತಿಸಿದ್ದು ಅದನ್ನು ನಿಪಿ1 ಎಂದು ಗುರುತಿಸಲಾಗಿದ್ದು. ಈಗ ಸಾಕ್ಷಿಯ ಸಹಿಯನ್ನು ನಿಪಿ1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸದರಿ ಜಪ್ತಿಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿರುತ್ತದೆ. ನಾನು ನಿಪಿ1 ರನ್ವಯ ನಮ್ಮ ಠಾಣಾ ಗುನ್ನಾ ಸಂಖ್ಯೆ 98/2020 ರಂತೆ ಪ್ರಕರಣವನ್ನು ದಾಖಲುಮಾಡಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ನಿಪಿ11, ಸಾಕ್ಷಿಯ ಸಹಿಯನ್ನು ನಿಪಿ11 (ಎ) ಎಂದು ಗುರುತಿಸಲಾಯಿತು. ದಿ.16.08.2020 ರಂದು ಸದರಿ ಆರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಮ.02.30 ಗಂಟೆಗೆ ನಮ್ಮ ಠಾಣಾ ಸಿಬ್ಬಂದಿಯವರ

ಮೂಲಕ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ದಿನ ನಾನು ಚಾಸಾ-6 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು 4 ನೇ ಆರೋಪಿಯ ಸದರಿ ಸ್ವಖುಷಿ ಹೇಳಿಕೆಯನ್ನು ಗುರುತಿಸಿದ್ದು ಅದನ್ನು ನಿಪಿ12, ಸಾಕ್ಷಿಯ ಸಹಿಯನ್ನು ನಿಪಿ12(ಎ) ಎಂದು ಗುರುತಿಸಲಾಯಿತು. ಅದೇ ದಿನ ನಾನು ಚಾಸಾ-1 ರವರಿಗೆ ಸದರಿ ಗೊಬ್ಬರ ಮೂಲ ಆಗಿರುತ್ತದೆ ಅಥವಾ ನಕಲಿಯಾಗಿರುತ್ತದೆ ಎಂದು ವರದಿ ಕೊಡಲು ಒಂದು ಪತ್ರವನ್ನು ಬರೆದಿರುತ್ತೇನೆ. ಸದರಿ ಪತ್ರವನ್ನು ಈಗ ನಿಪಿ13, ಸಾಕ್ಷಿಯ ಸಹಿಯನ್ನು ನಿಪಿ13(ಎ) ಎಂದು ಗುರುತಿಸಲಾದವು. ಚಾಸಾ-10 ರವರಿಂದ ಸದರಿ ಫೋಟೊಗಳನ್ನು ಅವರು ತೆಗೆದಿರುವುದಕ್ಕೆ ಸಾಕ್ಷ ಅದಿನಿಯಮದ ಪ್ರಕಾರ ಒಂದು ಪ್ರಮಾಣ ಪತ್ರವನ್ನು ಪಡೆದುಕೊಟ್ಟಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ14, ಸಾಕ್ಷಿಯ ಸಹಿಯನ್ನು ನಿಪಿ14(ಎ) ಎಂದು ಗುರುತಿಸಲಾಯಿತು. ದಿ.17.08.2020 ರಂದು ನಾನು ಹಾಗೂ ನಮ್ಮ ಠಾಣಾ ಮಹಿಳಾ ಸಿಬ್ಬಂದಿಯವರು ಗೋಗಿ ಹತ್ತಿರ 3 ನೇ ಆರೋಪಿಯನ್ನು ಬಂಧಿಸಿರುತ್ತೇವೆ ಹಾಗೂ ಅವರನ್ನು ವಿಚಾರಣೆಗೆ ಒಳಪಡಿಸಿರುತ್ತೇವೆ. ಹಾಗೂ ಸದರಿ 3 ನೇ ಆರೋಪಿಯ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ಸದರಿ ಸ್ವಖುಷಿ ಹೋಳಿಕೆಯನ್ನು ಗುರುತಿಸಿದ್ದು ಅದನ್ನು ನಿಪಿ15 ಸಾಕ್ಷಿಯ ಸಹಿಯನ್ನು ನಿಪಿ15(ಎ) ಎಂದು ಗುರುತಿಸಲಾಯಿತು.

ಅದೇ ದಿನ ಚಾಸಾ-4 ಮತ್ತು 5 ರವರನ್ನು ಬರಮಾಡಿಕೊಂಡು ಮ.02.45 ರಿಂದ 03.15 ರವರೆಗೆ 3 ನೇ ಆರೋಪಿಯ ಮನೆಯಲ್ಲಿರುವ ಒಂದು ರೇವಾ ಕಂಪನಿಯ ಚೀಲ ಹೊಲೆಯುವ ಯಂತ್ರವನ್ನು ಅಮಾನತ್ತು ಪಡೆಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ7 ಎಂದು ಗುರುತಿಸಲಾಗಿದ್ದು ಈಗ ಸಾಕ್ಷಿಯ ಸಹಿಯನ್ನು ನಿಪಿ7 (ಸಿ) ಎಂದು ಗುರುತಿಸಲಾಯಿತು. ನಿಪಿ7 ರ ಜೋತೆಗೆ ತೆಗೆಸಿರುವ ನಿಪಿ8 ಮತ್ತು 9 ರಂತೆ ಇರುವ 2 ಪೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಗೊಬ್ಬರ ಸಂಗ್ರಹ ಮಾಡಿದ ಸ್ಥಳಪಂಚನಾಮೆಯನ್ನು ಮ.03.20 ರಿಂದ 03.50 ರ ವರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ನಿಪಿ10 ರಂತೆ ಪಂಚನಾಮೆಯನ್ನು ಮಾಡಿ ಸದರಿ ಪಂಚರ

ಸಹಿಗಳನ್ನು ಪಡೆದಿರುತ್ತೇನೆ. ನಿಪಿ10 ರ ಮೇಲಿರುವ ಸಾಕ್ಷಿಯ ಸಹಿಯನ್ನು 10 (ಬಿ) ಎಂದು ಗುರುತಿಸಲಾಯಿತು.

ಅದೇ ದಿನ ನಾನು ಚಾಸಾ-6 ರಿಂದ 10 ರವರ ಮರುಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ 3 ನೇ ಆರೋಪಿಯನ್ನು ಯೋಗ್ಯ ಬೆಂಗಾವಲಿನೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ.25.08.2020 ರಂದು ಠಾಣೆಯಲ್ಲಿ ಮು.ಮಾಲುಗಳನ್ನು ಇಟ್ಟುಕೊಳ್ಳಲು ಪಿ ಎಫ್ ಸಲ್ಲಿಸಿ ನಿವೇದನೆ ಮಾಡಿಕೊಂಡಿರುತ್ತೇನೆ. ದಿ.30.08.2020 ರಂದು ಚಾಸಾ -11 ಮತ್ತು 12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ-1 ರವರು ಎಫ ಎಸ್ ಎಲ್ ವರದಿಯನ್ನು ತಂದುಕೊಟ್ಟಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಈಗಾಗಲೇ ನಿಪಿ5 ಎಂದು ಗುರುತಿಸಲಾಗಿರುತ್ತದೆ.

ದಿ.12.10.2020 ರಂದು ಮುಂದಿನ ತನಿಖೆಗಾಗಿ ಪ್ರಸ್ತುತ ಪ್ರಕರಣದ ಕಡತವನ್ನು ಚಾಸಾ-14 ರವರಿಗೆ ವಹಿಸಿರುತ್ತೇನೆ. ನಾನು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿನರುವ 4 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಿನ 3 ನೇ ಆರೋಪಿಯು ಗೈರು ಹಾಜರಿದ್ದು ಅವರ ಗುರುತಿನ ಬಗ್ಗೆ ಅವರ ಮಾನ್ಯ ವಕೀಲರು ಯಾವುದೇ ತಕರಾರು ಇರುವುದಿಲ್ಲವೆಂದು ಹೇಳುತ್ತಾರೆ.

**ಪಾಟಿ ಸವಾಲುಃ 2 ನೇ ಆರೋಪಿಯ ಪರ ಟಿ ಎನ್ ವಕೀಲರಿಂದಃ**

ಚಾಸಾ-1 ರವರು ನಿಪಿ1 ರಂತೆ ದೂರನ್ನು ಅವರೇ ಟೈಪ್ ಮಾಡಿಕೊಂಡು ಬಂದು ನನಗೆ ಸಲ್ಲಿಸಿರುತ್ತಾರೆ. ಚಾಸಾ-1 ರವರು ಕೃಷಿ ಅಧಿಕಾರಿಗಳು ಆಗಿರುತ್ತಾರೆ ಎಂದು ತಿಳಿದುಕೊಳ್ಳಲು ನಾನು ಯಾವುದೇ ಗುರುತಿನ ಚೀಟಿಯನ್ನು ಪಡೆದುಕೊಂಡು ಪರಿಶೀಲನೆ ಮಾಡಿರುವುದಿಲ್ಲ. ಚಾಸಾ-1 ರವರು ಕೃಷಿ ಅಧಿಕಾರಿಯಾಗಿರುತ್ತಾರೆ ಹಾಗೂ ಕರ್ತವ್ಯದ ಮೇಲೆ ಇರುತ್ತಾರೋ ಇಲ್ಲವೋ ಎಂದು ಅವರ ಹಿರಿಯ ಅಧಿಕಾರಿಗಳಿಗೆ ನಾನು ಯಾವುದೇ ಪತ್ರವನ್ನು ಬರೆದಿರುವುದಿಲ್ಲ. ಸದರಿ ದೂರನ್ನು ಸಲ್ಲಿಸುವ ದಿನ ಚಾಸಾ-1 ರವರು ಕರ್ತವ್ಯಕ್ಕೆ ಇರುವುದಕ್ಕೆ ಅವರ ಹಾಜರಾತಿ ಪ್ರಮಾಣ ಪತ್ರವನ್ನು

ಪಡೆದುಕೊಂಡಿರುವುದಿಲ್ಲ. ಚಾಸಾ-4 ಮತ್ತು 5 ರವರನ್ನು ಚಾಸಾ-9 ರವರು ಕರೆದುಕೊಂಡು ಬಂದಿರುತ್ತಾರೆ. ಚಾಸಾ-4 ಮತ್ತು 5 ರವರಿಗೆ ಪಂಚರಾಗಲು ನಾನು ನೋಟಿಸ ನ್ನು ಕೊಟ್ಟಿರುತ್ತೇನೆ. ಸದರಿ ಸಂದರ್ಭದಲ್ಲಿ ಕೊವಿಡ್ ಇದ್ದು ಚಾಸಾ-4 ಮತ್ತು 5 ರವರಿಗೆ ವೈದ್ಯಕೀಯ ಪರೀಕ್ಷೆಗೆ ಅಳವಡಿಸಿರುತ್ತೇನೆ. ಸದರಿ ನೊಟಿಸ್ ಗಳನ್ನು ಹಾಗೂ ವೈದ್ಯಕೀಯ ಪರಿಕ್ಷಾ ವರದಿಗಳನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಲಾಗಿರುತ್ತದೆ.

ನಾನು ನಿಪಿ7 ರಂತೆ ಪಂಚನಾಮೆಯನ್ನು ಮಾಡಲು ಹೋದಾಗ ಸದರಿ ಜಾಗ ಯಾರದ್ದಾಗಿರುತ್ತದೆ ಹಾಗೂ ಅದರ ಮಾಲಿಕರ ಯಾರು ಎಂದು ತಿಳಿದುಕೊಳ್ಳಲು ಸಂಬಂದ ಪಟ್ಟ ಅಧಿಕಾರಿಗಳಿಂದ ಯಾವುದೇ ದಾಖಲೆಯನ್ನು ಪಡೆದುಕೊಂಡಿಲ್ಲ. ನಾನು ನೋಡಿದಂತೆ ಚಾಸಾ-1 ರವರ ಗುನ್ನಾ ಸ್ಥಳದ ಮನೆಯ ಯಾವುದೇ ಸಂಖ್ಯೆಯನ್ನು ಹಾಕಿಲ್ಲ. ಸದರಿ ಮನೆಗಳು 6 ಕೊಣೆಗಳಾಗಿರುತ್ತದೆ ಎಂದು ತಿಳಿದುಕೊಳ್ಳಲು ಸಂಬಂಧಪಟ್ಟ ಪಿ ಡಿ ಓ ರವರಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲ. ಆರೋಪಿತರು ಸದರಿ ಮನೆಯ ಯಾವ ಕೊಣೆಯಲ್ಲಿ ಸದರಿ ಯಂತ್ರವನ್ನು ಇಟ್ಟಿರುತ್ತಾನೆ ಎಂದು ನಾನು ನಿಪಿ7 ರಲ್ಲಿ ನಮೂದು ಮಾಡಿರುವುದಿಲ್ಲ. ನಾನು ಸದರಿ ಮನೆಯ ಸದರಿ ಕೊಣೆಗಳನ್ನು ಅಳತೆ ಮಾಡಿಸಿರುವುದಿಲ್ಲ. ನಾವು 5 ಜನ ಹೊರತುಪಡಿಸಿದರೆ ಸ್ಥಳದಲ್ಲಿ ಬೇರೆ ಸಾರ್ವಜನಿಕರು ಇರಲಿಲ್ಲ. ಸದರಿ ಯಂತ್ರವನ್ನು ಸದರಿ ಮನೆಯ ಯಾವ ಕೊಣೆಯಲ್ಲಿ ಹಾಗೂ ಯಾವ ದಿಕ್ಕಿಗೆ ಇಡಲಾಗಿತ್ತು ಎಂದು ನಿಪಿ7 ರಲ್ಲಿ ನಾನು ನಮೂದು ಮಾಡಿಲ್ಲ. ನಾನು ಸದರಿ ಮನೆಯ ಹತ್ತಿರ ಇದ್ದ ಜನರನ್ನು ಪಂಚನಾಮೆಗಾಗಿ ಕರದಿರುವುದಿಲ್ಲ. ಸದರಿ ಸಂದರ್ಭದಲ್ಲಿ ಕೊವಿಡ್ ಇದ್ದುದ್ದರಿಂದ ಯಾವುದೇ ಜನ ಜಮಾಯಿಸಿರುವುದಿಲ್ಲ.

ನಾನು ಮೊದಲು ಗೊಬ್ಬರವೆಂದು ಮು.ಮಾಲನ್ನು ಪಡೆದುಕೊಂಡಿರುತ್ತೇನೆ. ದಿ.17.08.2020 ರಂದು ಚಾಸಾ-1 ರವರು ಸದರಿ ಗೊಬ್ಬರ ನಕಲಿಯಾಗಿರುತ್ತದೆ ಎಂದು ತಮ್ಮ ಮರುಹೇಳಿಕೆ ಕೊಟ್ಟಿದ್ದು ಅವರು ಯಾವ ಆಧಾರದ ಮೇಲೆ ಸದರಿ ಗೊಬ್ಬರ ನಕಲಿಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಹಾಗೂ ನಾನು ಅದರ ಬಗ್ಗೆ ವಿಚಾರಣೆ ಮಾಡಿಲ್ಲ. ಸದರಿ ಮಲ್ಲಿನಾಥ ದ್ಯಾವಗೊಂಡ ಇವರ ಹೇಳಿಕೆ ಮೇರೆಗೆ ಆರೋಪಿತರು ಅವರಿಗೆ ನಕಲಿ ಗೊಬ್ಬರ ಮಾರಾಟ ಮಾಡಿರುತ್ತಾರೆ ಎಂದು ನಾನು ಹೇಳಿರುತ್ತೇನೆ. ನನ್ನ ತನಿಖೆ ವೇಳೆಯಲ್ಲಿ ಆರೋಪಿತರು ನಕಲಿ ಗೊಬ್ಬರ ಮಾರಾಟ ಮಾಡುತ್ತಿದ್ದರೆ

ಎಂದು ನನಗೆ ಸಾರ್ವಜನಿಕರಿಂದ ಹಾಗೂ ರೈತರಿಂದ ಯಾವುದೇ ದೂರು ಬಂದಿಲ್ಲ. ನಾನು ಯಾವುದೇ ಸಾರ್ವಜನಿಕರಿಂದ ಹಾಗೂ ರೈತರಿಂದ ಆರೋಪಿತರು ನಕಲಿ ಗೊಬ್ಬರ ಮಾರಾಟ ಮಾಡಿರುತ್ತಾರೆ ಎಂದು ಹೇಳಿಕೆ ಪಡೆದುಕೊಂಡಿರುವುದಿಲ್ಲ. ಆರೋಪಿತರು ನಕಲಿ ಗೊಬ್ಬರ ಮಾರಾಟ ಮಾಡುತ್ತಿದ್ದಾರೆ ಎಂದು ಹೇಳಿ ನಾನು ಸಂಬಂದಪಟ್ಟ ಗ್ರಾಮದಲ್ಲಿ ಡಂಗುರವನ್ನು ಹೊಡೆಸಿದ್ದು ಅದಕ್ಕೆ ಯಾವುದೇ ದಾಖಲೆಯನ್ನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ.

ನ್ಯಾಯಾಲಯದ ಪ್ರಶ್ನೆಃ 3 ಮತ್ತು 4 ಆರೋಪಿತರಿಂದ ಯಾವಾಗ ಅವರಿಂದ ಅವರ ಸ್ವಖುಷಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೀರಿ ?

ಉತ್ತರಃ ಒಬ್ಬರಿಂದ 16. ಹಾಗೂ ಇನೊಬ್ಬರಿಂದ 17

ನ್ಯಾಯಾಲಯದ ಪ್ರಶ್ನೆಃ 3 ನೇ ಆರೋಪಿಯ ಮನೆ ಎಲ್ಲಿರುತ್ತದೆ ಹಾಗೂ ಅದರ ಸಂಖ್ಯೆ ಏನೂ ?

ಉತ್ತರಃ ಭೀ.ಗುಡಿ ಯುಕೆಪಿ ಕ್ಯಾಂಪ ಹಿಂದುಗಡೆ. ನನಗೆ ಸದರಿಯವರ ಮನೆ ನೆನಪಿಲ್ಲ.

3 ನೇ ಆರೋಪಿಯ ಮನೆ ಅವರ ಹೆಸರಿನಲ್ಲಿರುತ್ತದೆ. ಸದರಿ ಮನೆಯು 3 ನೇ ಆರೋಪಿಯ ಹೆಸರಿನಲ್ಲಿರುತ್ತದೆ ಇರುತ್ತದೆ ಎಂದು ತಿಳಿದುಕೊಳ್ಳಲು ಸಂಬಂದಪಟ್ಟ ಪಂಚಾಯತಿಯಿಂದ ಯಾವುದೇ ದಾಖಲೆಯನ್ನು ಪಡೆದಿಕೊಂಡಿರುವುದಿಲ್ಲ. ನಾನು ಸದರಿ ದಿನದಂದು 3 ನೇ ಆರೋಪಿಯ ಮನೆಗೆ ಮದ್ಯಾಹ್ನ ಹೋಗಿರುತ್ತೇನೆ. ಸದರಿ ದಿನದಂದು 3 ನೇ ಆರೋಪಿಯೊಂದಿಗೆ ಅವರ ಮನೆಗೆ ಇಬ್ಬರು ಪಂಚರೊಂದಿಗೆ ಹೋಗಿರುತ್ತೇನೆ. ನಾವು 3 ನೇ ಆರೋಪಿಯ ಮನೆಗೆ ಹೋದಾಗ ಅವರ ಮನೆಗೆ ಬೀಗ ಹಾಕಲಾಗಿತ್ತು. ಸದರಿ ಮನೆಯ ಬೀಗ 3 ನೇ ಆರೋಪಿಯ ಹತ್ತಿರ ಇತ್ತು. ಸದರಿ ವಿಚಾರಗಳನ್ನು ನಿಪಿ10 ರಲ್ಲಿ ನಾನು ನಮೂದುಮಾಡಿರುವುದಿಲ್ಲ. ನಾನು 3 ನೇ ಆರೋಪಿಯ ಮನೆಗೆ ಹೋಗಿ ಅಲ್ಲಿ ಒಂದು ಪ್ರತ್ಯೆಕವಾದ ಪಂಚನಾಮೆ ಮಾಡಿ ಸಾಕ್ಷಿಗಳ ಹೇಳಿಕೆ ಪಡೆದುಕೊಂಡಿರುತ್ತೇನೆ.ಸಾಕ್ಷಿ ಮುಂದುವರೆದು ಯಾವುದೇ ಸಾಕ್ಷಿಯ ಹೇಳಿಕೆ ಪಡೆದುಕೊಂಡಿರುವುದಿಲ್ಲವೆಂದು ಹೇಳಿರುತ್ತಾರೆ. ನಿಪಿ10 ನ್ನು ಮಾಡಿರುವುದಕ್ಕೆ ಪೋಟೊವನ್ನು ತೆಗೆಸಿರುತ್ತೇನೆ. ಸದರಿ ಪೋಟೊವನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರಪಡಿಸಲಾಗಿರುತ್ತದೆ.

ಸದರಿ ಮಲ್ಲಿನಾಥ ದ್ಯಾವಗೊಂಡ ಇವರು ವ್ಯಾಪಾರಸ್ತ ಇಲವೊ ಎಂದು ನಾನು ವಿಚಾರಣೆ ಮಾಡಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಸಂಗ್ರಹಿಸಿರುವುದಿಲ್ಲ. ಸದರಿ ಮಲ್ಲಿನಾಥ ಇವರು ಗೊಬ್ಬರ ಮಾರಾಟ ಮಾಡುತ್ತಾರೆ ಎಂದು ನಾನು ನನ್ನ ತನಿಖೆ ವೇಳೆಯಲ್ಲಿ ತನಿಖೆ ಮಾಡಿರುವುದಿಲ್ಲ. ನಾನು ನಿಪಿ15 ರ 2 ಖಂಡಿಕೆಯಲ್ಲಿ ಮತ್ತೊಂದು ಗಿರಾಕಿಯಂದು ನಮೂದು ಮಾಡಿದು ಆ ಗಿರಾಕಿ ಹೆಸರು ನನಗೆ ಗೊತ್ತಿರುವುದಿಲ್ಲ ಹಾಗೂ ನಾನು ಅವರನ್ನು ವಿಚಾರಿಸಿರುವುದಿಲ್ಲ. ಸದರಿ ಮಲ್ಲಿನಾಥ ಅಂಗಡಿಯು ಯಾರ ಹೆಸರಿನಲ್ಲಿರುತ್ತದೆ ಎಂದು ನಾನು ತಿಳಿದುಕೊಳ್ಳಲು ಯಾವುದೇ ದಾಖಲೆಯನ್ನು ಸಂಗ್ರಹಿಸಿರುವುದಿಲ್ಲ. ಸದರಿ ಮಲ್ಲಿನಾಥ ಇವರ ಗೊಬರ ಅಂಗಡಿಯಲ್ಲಿ 298 ಚೀಲ ನಕಲಿ ಗೊಬ್ಬರ ಇಟ್ಟಿದರ ಬಗ್ಗೆ ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಾನು ಸದರಿ 298 ಚೀಲಗಳನ್ನು ಏಣಿಸಿರುವುದಿಲ್ಲ. ಸದರಿ ಲಾರಿಯ ಮಾಲಿಕರು ಮಂಹಾತೇಶ ಮಾಲಗತ್ತಿ ಇವರ ಆಗಿರುತ್ತಾರೆ. ನಾನು ಸದರಿ ಮಂಹಾತೇಶ ಮಾಲಗತ್ತಿಯವರನ್ನು ವಿಚಾರಿಸಿರುವುದಿಲ್ಲ. ಸದರಿ ಲಾರಿಯ ಸಂಖ್ಯೆ ಎಮ್ ಎಚ್ 13 ಆರ್ 36 ಆಗಿರುತ್ತದೆ. ಸದರಿ 298 ನಕಲಿ ರಸಗೊಬ್ಬರ ಚೀಲಗಳ ಬಗ್ಗೆ ಪಂಚನಾಮೆ ಮಾಡಿರುವುದಿಲ್ಲ.

**ಮುಂದುವರೆದು ಪಾಟೀ ಸವಾಲಿಗೆ ಮುದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.